ಬಿ.ಪಿ.ಎಲ್. ಕಾರ್ಡ್‌ಗಳನ್ನು ವಿತರಿಸುವುದು

190 (550) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಸಿ.ಎಸ್.ಪುರ ಸೇರಿದಂತೆ ಸುಮಾರು 2500 ಬಿಪಿಎಲ್ ಫಲಾನುಭವಿಗಳನ್ನು ಗುರುತಿಸಿದ್ದು, ಇದುವರೆಗೂ ಬಿಪಿಎಲ್ ಪಡಿತರ ಚೀಟಿಯನ್ನು ವಿತರಿಸದಿರಲು ಕಾರಣಗಳೇನು;

ಆ) ಬಿಪಿಎಲ್ ಪಡಿತರ ಚೀಟಿಯನ್ನು ಯಾವಾಗ ವಿತರಿಸಲಾಗುವುದು; (ಮಾಹಿತಿ ನೀಡುವುದು)?

ಕು॥ ಶೋಭಾ ಕರಂದ್ಲಾಜೆ (ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಈಗಾಗಲೇ ವಿತರಿಸಿರುವ ಪಡಿತರ ಚೀಟಿಗಳ ಸಂಖ್ಯೆ ತಾಲ್ಲೂಕಿನಲ್ಲಿ ಇರಬಹುದಾದ ಕುಟುಂಬಗಳ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ ಆದುದರಿಂದ ಅನರ್ಹ ಪಡಿತರ ಚೀಟಿಗಳನ್ನು ಗುರುತಿಸುವ ಕಾರ್ಯ ತಾಲ್ಲೂಕಿನಲ್ಲಿ ನಡೆದಿರುತ್ತದೆ.

ಆ) ರಾಜ್ಯಾದ್ಯಾಂತ ಅನರ್ಹ ಹಾಗೂ ಅರ್ಹ ಕುಟುಂಬಗಳನ್ನು ಗುರುತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಈ ಕೆಲಸ ಮುಗಿದ ಕೂಡಲೆ ಅರ್ಹರೆಂದು ಕಂಡು ಬಂದ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯನ್ನು ನಷ್ಟ ರಹಿತವಾಗಿ ನಡೆಸುವುದು

191 (551) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಪರ್ಮಿಟ್ ಇಲ್ಲದೇ ಸಂಚರಿಸುವ ಖಾಸಗಿ ಬಸ್‌ಗಳ ಸಂಚಾರದಿಂದಾಗಿ ಕೆ.ಎಸ್.ಆರ್.ಟಿ.ಸಿ. ಡಿಪೋ ಸತತವಾಗಿ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಖಾಸಗಿ ಬಸ್‌ಗಳನ್ನು ನಿಲ್ಲಿಸಿ ಸಾರ್ವಜನಿಕರಿಗೆ ಉತ್ತಮ ಬಸ್ ಸೌಲಭ್ಯ ಕಲ್ಪಿಸಿ ಸಂಸ್ಥೆಯನ್ನು ನಷ್ಟರಹಿತವಾಗಿ ನಡೆಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪರ್ಮಿಟ್ ಇಲ್ಲದೆ ಅನಧಿಕೃತವಾಗಿ ಆಚರಣೆ ಮಾಡುತ್ತಿರುವ ಖಾಸಗಿ ವಾಹನಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಸಾರಿಗೆ ಅಧಿಕಾರಿಗಳಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ತುರುವೇಕೆರೆ ತಾಲ್ಲೂಕಿನ ಮಾರ್ಗಗಳು ರಾಷ್ಟ್ರೀಕರಣವಾಗದೇ ಇರುವುದರಿಂದ ಖಾಸಗಿ ಬಸ್ಸುಗಳಿಗೆ ನೀಡಿರುವ ರಹದಾರಿಗಳನ್ನು ನಿಲ್ಲಿಸಲು ಅವಕಾಶವಿರುವುದಿಲ್ಲ. ಅದಾಗ್ಯೂ ಖಾಸಗಿ ಬಸ್ ಹಾಗೂ ಮ್ಯಾಕ್ಸಿ ಕ್ಯಾಬ್‌ಗಳ ಅನಧಿಕೃತ ಸಂಚಾರವನ್ನು ನಿಯಂತ್ರಿಸಲು ತಪಾಸಣೆ ಕಾರ್ಯ ಕೈಗೊಂಡು ಒಟ್ಟು 52 ಬಸ್ಸುಗಳು ಮತ್ತು 29 ಮ್ಯಾಕ್ಸಿ ಕ್ಯಾಬ್‌ಗಳಿಗೆ ತನಿಖಾ ವರದಿ ನೀಡಿ ಒಟ್ಟು ರೂ. 4,31,958.00ಗಳ ತೆರಿಗೆ ವಸೂಲಿ ಮಾಡಲಾಗಿದೆ.

ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಸೌಕರ್ಯ

192 (552) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಪೊಲೀಸ್ ಸಿಬ್ಬಂದಿಗಳಿಗೆ ವಸತಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವಸತಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ಹೌದು. ಪ್ರಸ್ತುತ ತುರುವೇಕೆರೆ ತಾಲ್ಲೂಕಿಗೆ ಸೇರಿದ ಎರಡು ಪೊಲೀಸ್ ಠಾಣೆ ಮತ್ತು ಎರಡು ಪೊಲೀಸ್ ಹೊರಠಾಣೆಗಳ ಒಟ್ಟು ಸಿಬ್ಬಂದಿ ಮಂಜೂರಾತಿ ಬಲ 76 ಇರುತ್ತದೆ. ಈ ಪೈಕಿ 40 ಸಿಬ್ಬಂದಿಗಳಿಗೆ ಈಗಾಗಲೇ ವಸತಿಗೃಹ ಒದಗಿಸಲಾಗಿದ್ದು, ಉಳಿದ 36 ಸಿಬ್ಬಂದಿಗಳಿಗೆ ವಸತಿಗೃಹ ಒದಗಿಸಬೇಕಾಗಿದೆ.

ಆ) ರಾಜ್ಯದ ವಿವಿಧ ಜಾಗಗಳಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಒದಗಿಸುವ ನಿಟ್ಟಿನಲ್ಲಿ ತ್ವರಿತ ವಸತಿ ಯೋಜನೆ–3ರಡಿ ರೂ. 440.00 ಕೋಟಿ ವೆಚ್ಚದಲ್ಲಿ 4333 ವಸತಿ ಗೃಹಗಳನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮದ ಮೂಲಕ ನಿರ್ಮಿಸಲು ಸರ್ಕಾರ